ಮನೆಯಿಂದ ಕೆಲಸದ ಆಮಿಷ ● ಹಣ ಹೂಡಿಕೆ ಹೆಸರಿನಲ್ಲಿ ಮೋಸ ● ಹೈದರಾಬಾದ್–ದುಬೈ ಜಾಲ

₹158 ಕೋಟಿ ವಂಚನೆ: 11 ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಯಿಂದ ಕೆಲಸ'ದ ಆಮಿಷವೊಡ್ಡಿ ಜನರನ್ನು ವಂಚಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಸೈಬರ್ ಕ್ರೈಂ ಪೊಲೀಸರು, 11 ಆರೋಪಿಗಳನ್ನು ಬಂಧಿಸಿದ್ದಾರೆ.

'ವಂಚನೆ ಸಂಬಂಧ ವಿದ್ಯಾರಣ್ಯಪುರ ನಿವಾಸಿಯೊಬ್ಬರು ದೂರು ನೀಡಿದ್ದರು. ಆರೋಪಿಗಳಾದ ಅಮಿರ್ ಸುಹಾಲಿ, ಇನಾಯತ್ ಖಾನ್, ನಯಾಜ್ ಅಹಮ್ಮದ್, ಆದಿಲ್ ಆಗಾ, ಸಯ್ಯದ್ ಅಬ್ಬಾಸ್ ಅಲಿಖಾನ್, ಮಿಥುನ್ ಮನೀಶ್ ಷಾ, ನಯನಾ, ಸತೀಶ್, ಮೀರ್ ಶಶಿಕಾಂತ್ ಷಾ ಸೇರಿ 11 ಮಂದಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'₹60 ಲಕ್ಷ ಹಣವಿದ್ದ ಆರೋಪಿಗಳ ವಿವಿಧ ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತಗೊಳಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ 11 ಮೊಬೈಲ್, 2 ಲ್ಯಾಪ್‌ಟಾಪ್, 15 ಸಿಮ್ ಕಾರ್ಡ್ ಹಾಗೂ ಮೂರು ಬ್ಯಾಂಕ್‌ಗಳ ಚೆಕ್ ಪುಸ್ತಕ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

30 ಖಾತೆಗಳಲ್ಲಿ 158 ಕೋಟಿ ವಹಿವಾಟು: 'ಜನರನ್ನು ವಂಚಿಸುವ ಉದ್ದೇಶದಿಂದ ಆರೋಪಿಗಳು ರಾಜ್ಯ ಹಾಗೂ ಹೊರ ರಾಜ್ಯಗಳ ವಿವಿಧ ಬ್ಯಾಂಕ್‌ಗಳಲ್ಲಿ 30 ಖಾತೆಗಳನ್ನು ತೆರೆದಿದ್ದರು. ಇಂಥ ಖಾತೆಗಳಲ್ಲಿ ಇದುವರೆಗೂ ₹ 158 ಕೋಟಿ ವಹಿವಾಟು ಆಗಿದೆ. ಇದೆಲ್ಲವೂ ವಂಚನೆ ಹಣವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

'ಜಾಲದ ವಂಚನೆಗೆ ಸಂಬಂಧಪಟ್ಟಂತೆ ದೇಶದಲ್ಲಿ 2,143 ಪ್ರಕರಣಗಳು ದಾಖಲಾಗಿವೆ. ಕರ್ನಾಟಕದಲ್ಲಿ 265 ಪ್ರಕರಣಗಳು ವರದಿಯಾಗಿದ್ದು, ಬೆಂಗಳೂರಿನಲ್ಲಿ 135 ಎಫ್‌ಐಆರ್ ದಾಖಲಾಗಿವೆ. ಈ ಜಾಲವು ಹಲವು ವರ್ಷಗಳಿಂದ ಕೃತ್ಯ ಎಸಗಿದ್ದು, ಆರೋಪಿಗಳ ಸುಳಿವು ಯಾರಿಗೂ ಸಿಕ್ಕಿರಲಿಲ್ಲ. ಸಿಸಿಬಿ ಸೈಬರ್ ಕ್ರೈಂ ಪೊಲೀಸರು, ನಿರಂತರವಾಗಿ ಮಾಹಿತಿ ಕಲೆಹಾಕಿ ಜಾಲ ಭೇದಿಸಿದ್ದಾರೆ. ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕದಿಂದ ದುಬೈವರೆಗೂ ಜಾಲ ಹಬ್ಬಿದೆ' ಎಂದು ಹೇಳಿದರು.

ಮಾನವ ಸಂಪನ್ಮೂಲ ಅಧಿಕಾರಿ: 'ಆರೋಪಿ ಅಮಿರ್ ಸುಹಾಲಿ, ಮಾನವ ಸಂಪನ್ಮೂಲ ಅಧಿಕಾರಿ. ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದ ಈತ, ತನ್ನನ್ನು ಸಂಪರ್ಕಿಸುತ್ತಿದ್ದ ಯುವಕ–ಯುವತಿಯರಿಗೆ ಕೆಲಸ ಕೊಡಿಸುವ ಆಮಿಷವೊಡ್ಡುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮತ್ತೊಬ್ಬ ಆರೋಪಿ ಮೀರ್ ಶಶಿಕಾಂತ್ ಷಾ, ಷೇರು ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದ. ಇನಾಯತ್ ಖಾನ್, ಸರಕು ಸಾಗಣೆ ಕಂಪನಿಯ ಡೆಲಿವರಿ ಬಾಯ್. ನಯಾಜ್ ಅಹಮ್ಮದ್, ತರಕಾರಿ ವ್ಯಾಪಾರಿ. ಉಳಿದ ಆರೋಪಿಗಳು, ಷೇರು ವ್ಯವಹಾರ ಹಾಗೂ ಸ್ವಂತ ಉದ್ಯೋಗದಲ್ಲಿದ್ದರು' ಎಂದು ತಿಳಿಸಿದರು.

ಯಾರದ್ದೋ ಹೆಸರಿನಲ್ಲಿ ಬ್ಯಾಂಕ್ ಖಾತೆ: 'ಜನರ ಗಮನಕ್ಕೆ ಬಾರದಂತೆ ದಾಖಲೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದ ಆರೋಪಿಗಳು, ಬ್ಯಾಂಕ್ ಖಾತೆ ತೆರೆಯುತ್ತಿದ್ದರು. ಸಿಮ್ ಕಾರ್ಡ್‌ಗಳನ್ನೂ ಖರೀದಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

ದುಬೈವರೆಗೂ ಜಾಲ: 'ಬ್ಯಾಂಕ್ ಪಾಸ್ ಪುಸ್ತಕ, ಚೆಕ್ ಪುಸ್ತಕ ಹಾಗೂ ಸಿಮ್ ಕಾರ್ಡ್‌ಗಳನ್ನು ಹೈದರಾಬಾದ್‌ನಿಂದ ಮುಂಬೈಗೆ ಬಸ್‌ನಲ್ಲಿ ಕಳುಹಿಸಲಾಗುತ್ತಿತ್ತು. ಮುಂಬೈನಿಂದ ದುಬೈಗೆ ವಿಮಾನ, ಹಾಗೂ ಹಡಗು ಮೂಲಕ ಸಾಗಿಸಲಾಗುತ್ತಿತ್ತು. ಅದೇ ದಾಖಲೆಗಳನ್ನು ಪಡೆಯುತ್ತಿದ್ದ ದುಬೈನಲ್ಲಿದ್ದ ಆರೋಪಿಗಳು, ವಂಚನೆಗೆ ಬಳಸುತ್ತಿದ್ದರು' ಎಂದು ತಿಳಿಸಿದರು.

ಜಾಹೀರಾತು ನೀಡಿ ವಂಚನೆ: 'ಮನೆಯಿಂದ ಕೆಲಸ ಮಾಡಿ, ಕೈ ತುಂಬ ಹಣ ಗಳಿಸಿ' ಎಂಬುದಾಗಿ ಜಾಹೀರಾತು ನೀಡುತ್ತಿದ್ದ ಆರೋಪಿಗಳು, ಹೂಡಿಕೆ ಹೆಸರಿನಲ್ಲಿ ಹಣ ಪಡೆಯುತ್ತಿದ್ದರು. ಮೊದಲೇ ಸೃಷ್ಟಿಸಿದ್ದ ಬ್ಯಾಂಕ್ ಖಾತೆಗೆ ಹಣ ಹಾಕಿಸಿಕೊಳ್ಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಬಂಧಿತರು ಮಧ್ಯವರ್ತಿಗಳಾಗಿದ್ದರು. ಅದಕ್ಕಾಗಿ ಕಮಿಷನ್ ಪಡೆಯುತ್ತಿದ್ದರು. ಜಾಲದ ಪ್ರಮುಖ ರೂವಾರಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಮುಖ್ಯಾಂಶಗಳು

- ಸಿಸಿಬಿ ಸೈಬರ್ ಪೊಲೀಸರ ಕಾರ್ಯಾಚರಣೆ
- ವಂಚನೆಗೆ 30 ಖಾತೆಗಳ ಬಳಕೆ
- ಕರ್ನಾಟಕದಲ್ಲಿ 265 ಮಂದಿಗೆ ವಂಚನೆ

ಕೆಲಸ, ಉಡುಗೊರೆ, ಹೂಡಿಕೆ, ಹೆಚ್ಚು ಲಾಭ ಹಾಗೂ ನಾನಾ ರೀತಿಯ ಆಮಿಷಗಳ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು

ಬಿ. ದಯಾನಂದ್
ಬೆಂಗಳೂರು ಪೊಲೀಸ್ ಕಮಿಷನರ್

₹ 1.52 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ₹1.52 ಕೋಟಿ ಮೌಲ್ಯದ ಮಾದಕ ವಸ್ತು (ಡ್ರಗ್ಸ್) ಜಪ್ತಿ ಮಾಡಿದ್ದಾರೆ.

'ಜ್ಞಾನಭಾರತಿ, ಬಾಣಸವಾಡಿ, ಹುಳಿಮಾವು ಹಾಗೂ ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಲಾಯಿತು. ಡ್ರಗ್ಸ್ ಮಾರಾಟ ಹಾಗೂ ಸಾಗಣೆಯಲ್ಲಿ ತೊಡಗಿದ್ದ ನಾಲ್ವರು ವಿದೇಶಿ ಪ್ರಜೆಗಳು ಸೇರಿ 7 ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'9,219 ಗ್ರಾಂ ತೂಕದ ಎಕ್ಸ್‌ಟೆಸ್ಸಿ ಮಾತ್ರೆಗಳು, 505 ಎಂಡಿಎಂಎ ಮಾತ್ರೆಗಳು, 150 ಗ್ರಾಂ ತೂಕದ ಚರಸ್ ಹಾಗೂ 100 ಗ್ರಾಂ ತೂಕದ ಕೊಕೇನ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹1.52 ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ' ಎಂದು ತಿಳಿಸಿದರು.

ವ್ಯವಸ್ಥಿತ ಜಾಲ: 'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ಬಗ್ಗೆ ನಿರಂತರವಾಗಿ ಮಾಹಿತಿ ಸಂಗ್ರಹಿಸಿ, ಈ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಆರೋಪಿಗಳಾದ ಶೇಕ್ ಮೊಹಮ್ಮದ್ ಅರ್ಬಾಜ್, ಗೌತಮ್, ಕೆ. ಅಭಿಷೇಕ್, ಎನ್. ಜಾಧವ್ ಸೇರಿದಂತೆ 7 ಮಂದಿ ಸಿಕ್ಕಿಬಿದ್ದರು' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳು, ಡ್ರಗ್ಸ್ ಮಾರಾಟಕ್ಕೆ ವ್ಯವಸ್ಥಿತ ಜಾಲ ರೂಪಿಸಿದ್ದರು. ಹೊರ ರಾಜ್ಯ ಹಾಗೂ ವಿದೇಶಗಳಿಂದ ಡ್ರಗ್ಸ್ ತರಿಸುತ್ತಿದ್ದ ಆರೋಪಿಗಳು ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು' ಎಂದರು.

₹ 3 ಕೋಟಿ ಮೌಲ್ಯದ ಇ–ಸಿಗರೇಟ್ ಜಪ್ತಿ

ಬೆಂಗಳೂರು: ದುಬೈನಿಂದ ವಿಮಾನದ ಮೂಲಕ ನಗರಕ್ಕೆ ತರಿಸಿ ಅಕ್ರಮವಾಗಿ ಮಾರುತ್ತಿದ್ದ ₹ 3 ಕೋಟಿ ಮೌಲ್ಯದ ಇ–ಸಿಗರೇಟ್‌ಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದಾರೆ.

'ಕೇರಳದ ಶೋಹೇಬ್ ನಗರದಲ್ಲಿ ಇ–ಸಿಗರೇಟ್ ಮಾರುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ದಾಳಿ ಮಾಡಿ ಆರೋಪಿಯನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ, ಇ–ಸಿಗರೇಟ್‌ಗಳು ಪತ್ತೆಯಾದವು' ಎಂದು ಪೊಲೀಸರು ಹೇಳಿದರು.

'ದುಬೈನಿಂದ ದೆಹಲಿಗೆ ಇ–ಸಿಗರೇಟ್ ಪೊಟ್ಟಣಗಳು ಬರುತ್ತಿದ್ದವು. ಅದೇ ಪೊಟ್ಟಣಗಳನ್ನು ಆರೋಪಿ ಬೆಂಗಳೂರಿಗೆ ತರುತ್ತಿದ್ದ. ವ್ಯಾಪಾರಿಗಳ ಮೂಲಕ ₹ 5 ಸಾವಿರಕ್ಕೆ ಒಂದು ಸಿಗರೇಟ್ ಮಾರುತ್ತಿದ್ದ.'

'ಆನ್‌ಲೈನ್ ಮೂಲಕವೂ ಹಣ ಪಡೆಯುತ್ತಿದ್ದ ಆರೋಪಿಗಳು, ಗ್ರಾಹಕರ ವಿಳಾಸಕ್ಕೆ ಸಿಗರೇಟ್ ಕಳುಹಿಸುತ್ತಿದ್ದ. ಇದಕ್ಕಾಗಿ ಸರಕು ಸಾಗಣೆ ಆ್ಯಪ್‌ಗಳನ್ನು ಬಳಸುತ್ತಿದ್ದ. ಆರೋಪಿ ವಿರುದ್ಧ ಸುದ್ದಗುಂಟೆಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಮಣಿಪುರ ಹಿಂಸಾಚಾರ–ಇಬ್ಬರ ಸಾವು

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಮಂಗಳವಾರ ಮತ್ತೆ ಹಿಂಸಾಚಾರ ನಡೆದಿದೆ. ಬಂಡುಕೋರರು ಮತ್ತು ಗ್ರಾಮಸ್ಥರ ನಡುವಿನ ಗುಂಡಿನ ಕಾಳಗದಲ್ಲಿ ಗ್ರಾಮದ ಇಬ್ಬರು ಸ್ವಯಂ ಸೇವಕರು ಮೃತಪಟ್ಟು, ಇತರ ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಎನ್.ಮೈಕೆಲ್ (33) ಹಾಗೂ ಎಂ.ಖಾಬಾ(23) ಎಂದು ಗುರುತಿಸಲಾಗಿದೆ. ಪಶ್ಚಿಮ ಇಂಫಾಲ್ ಮತ್ತು ಕಂಗ್‌ಪೋಕ್ಪಿ ಜಿಲ್ಲೆಯ ಗಡಿಯಲ್ಲಿರುವ ಕಡಂಗ್‌ಬಂದ್ ಗ್ರಾಮದಲ್ಲಿರುವ ಶಿಬಿರದಲ್ಲಿ ಈ ಘಟನೆ ನಡೆದಿದೆ. 'ಶಿಬಿರದ ಮೇಲೆ ಬಂಡುಕೋರರು ದಾಳಿ ನಡೆಸಿದರು. ಗ್ರಾಮಸ್ಥರು ಪ್ರತಿದಾಳಿ ಆರಂಭಿಸಿದ ವೇಳೆ ಗುಂಡಿನ ಕಾಳಗ ನಡೆದಿದೆ. ಆಗ, ಬಂಡುಕೋರರು ಮತ್ತಷ್ಟು ದಾಳಿಯನ್ನು ತೀವ್ರಗೊಳಿಸಿದರು' ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ಕಾಳಗ ಆರಂಭಗೊಂಡ ಬೆನ್ನಲ್ಲೇ, ಭೀತರಾದ ಮಹಿಳೆಯರು, ಮಕ್ಕಳು ಹಾಗೂ ವಯಸ್ಸಾದವರು ಗ್ರಾಮವನ್ನು ತೊರೆದು, ನೆರೆಯ ಗ್ರಾಮ ಕೌತ್ರುಕ್‌ನತ್ತ ಓಡಿ ಹೋದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಥಳಕ್ಕೆ ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ಕಳುಹಿಸಲಾಗಿದ್ದು, ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ತಿಳಿಸಿದ್ದಾರೆ.

ಆರ್ಥಿಕ ನಷ್ಟ: ಯೂಟ್ಯೂಬ್ ನೋಡಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ. ಅಗ್ರಹಾರ ಬಳಿಯ ಟೆಲಿಕಾಂ ಬಡಾವಣೆಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣದ ಆರೋಪಿ ಮದನ್ ಕುಮಾರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮದನ್ ಕುಮಾರ್, ಮೆಕ್ಯಾನಿಕಲ್ ಎಂಜಿನಿಯರ್. ಈತನಿಂದ ₹6.57 ಲಕ್ಷ ಮೌಲ್ಯದ ಚಿನ್ನಾಭರಣ, ₹30 ಸಾವಿರ ಮೌಲ್ಯದ ಬೆಳ್ಳಿ ಸಾಮಗ್ರಿ ಹಾಗೂ ₹1.35 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಲ್ಯೂಮಿನಿಯಂ ಕಾರ್ಖಾನೆ ಆರಂಭಿಸಿದ್ದ ಮದನ್‌ಕುಮಾರ್, ಆರ್ಥಿಕವಾಗಿ ಬೆಳೆದಿದ್ದ. ಆದರೆ, ಈಚೆಗೆ ಕಾರ್ಖಾನೆಯಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ಕಾರ್ಖಾನೆಯ ವಸ್ತುಗಳು ಸುಟ್ಟು ಹೋಗಿದ್ದವು. ಇದರಿಂದಾಗಿ ಮದನ್, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ವಿಮೆ ಕಂಪನಿಯಿಂದಲೂ ಹೆಚ್ಚು ಹಣ ಬಂದಿರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕಾರ್ಖಾನೆ ನಿರ್ವಹಣೆಗೆಂದು ಮದನ್ ಹೆಚ್ಚು ಸಾಲ ಮಾಡಿದ್ದ. ಬೆಂಕಿ ಅವಘಡ ನಂತರ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಸಾಲಗಾರರ ಕಿರುಕುಳ ಹೆಚ್ಚಾಗಿತ್ತು. ಸಾಲ ತೀರಿಸಲು ಹಣ ಹೊಂದಿಸುವುದಕ್ಕಾಗಿ ಕಳ್ಳತನಕ್ಕೆ ಸಂಚು ರೂಪಿಸಿದ್ದ' ಎಂದು ಹೇಳಿವೆ.

'ಮನೆಯಲ್ಲಿ ಕಳ್ಳತನ ಮಾಡುವುದು ಹೇಗೆ? ಎಂಬುದನ್ನು ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿ ಮದನ್ ತಿಳಿದುಕೊಂಡಿದ್ದ. ಟೆಲಿಕಾಂ ಬಡಾವಣೆಯ 6ನೇ ಅಡ್ಡರಸ್ತೆಯಲ್ಲಿರುವ ಮನೆಯೊಂದಕ್ಕೆ ಹೋಗಿದ್ದ ಆರೋಪಿ, ಕಟರ್‌ನಿಂದ ಬಾಗಿಲು ಕೊರೆದು ಒಳಗೆ ನುಗ್ಗಿದ್ದ. ಕೈಗವಸು ಧರಿಸಿದ್ದ. ಮನೆಯಲ್ಲಿದ್ದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಕದ್ದುಕೊಂಡು ಪರಾರಿಯಾಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕ್ಯಾಮೆರಾ ಬಂದ್ ಮಾಡಿ ಕಳ್ಳತನ: ಮಹಿಳೆ ಬಂಧನ

ಬೆಂಗಳೂರು: ಸದಾಶಿವನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಗ್ಯಾಸ್ ಕಟರ್‌ನಿಂದ ಕಬೋರ್ಡ್ ಬಾಗಿಲು ಕತ್ತರಿಸಿ ಕಳ್ಳತನ ಮಾಡಿದ್ದ ಆರೋಪದಡಿ ಮನೆ ಕೆಲಸದ ಮಹಿಳೆ ಶಾಂತಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿಯ ಶಾಂತಾ, ಹಲವು ವರ್ಷಗಳಿಂದ ಮನೆ ಕೆಲಸ ಮಾಡುತ್ತಿದ್ದರು. ಮನೆ ಮಾಲೀಕ ನೀಡಿದ್ದ ದೂರು ಆಧರಿಸಿ ಶಾಂತಾ ಅವರನ್ನು ಬಂಧಿಸಲಾಗಿದೆ. ಇವರಿಂದ ₹ 30 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾಲೀಕರ ಕುಟುಂಬ ವಿದೇಶಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ ಕಳ್ಳತನಕ್ಕೆ ಸಂಚು ರೂಪಿಸಿದ್ದ ಶಾಂತಾ, ಮನೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ತಂತಿ ಕತ್ತರಿಸಿ ಬಂದ್ ಮಾಡಿದ್ದರು. ನಂತರ, ಗ್ಯಾಸ್ ಕಟರ್ ಹಾಗೂ ಸುತ್ತಿಗೆ ಬಳಸಿ ಮನೆಯ ಕಬೋರ್ಡ್ ಬಾಗಿಲು ಮುರಿದು ಚಿನ್ನಾಭರಣ ಕದ್ದಿದ್ದರು' ಎಂದರು.

'ಜ. 25ರಂದು ಮಾಲೀಕರ ಕುಟುಂಬ ವಾಪಸು ಬಂದಿತ್ತು. ಅಂದು ತಡರಾತ್ರಿ ಮನೆಯಲ್ಲಿ ಕೂಗಾಡಿದ್ದ ಶಾಂತಾ, 'ಯಾರೋ ಕಳ್ಳರು ಕಬೋರ್ಡ್ ಮುರಿದು ಚಿನ್ನಾಭರಣ ಕದ್ದೊಯ್ದರು' ಎಂದಿದ್ದರು. ಮಾಲೀಕ ಹಾಗೂ ಅವರ ಮಕ್ಕಳು ಕಳ್ಳರಿಗಾಗಿ ಹುಡುಕಾಡಿದ್ದರು. ಯಾವುದೇ ಸುಳಿವು ಸಿಕ್ಕಿರಲಿಲ್ಲ. ನಂತರ, ಕಳ್ಳತನ ಬಗ್ಗೆ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

'ತನಿಖೆ ಕೈಗೊಂಡಾಗ ಮಹಿಳೆ ಮೇಲೆ ಅನುಮಾನ ಬಂದಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು. ಈ ಹಿಂದೆಯೇ ಶಾಂತಾ, ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಬಗ್ಗೆಯೂ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಂಬ್' ಎಂದಿದ್ದ ಪ್ರಯಾಣಿಕನ ಬಂಧನ

ಬೆಂಗಳೂರು: 'ನನ್ನ ಬಳಿ ಬಾಂಬ್ ಹಾಗೂ ಚಾಕು ಇದೆಯಾ ? ಪದೇ ಪದೇ ತಪಾಸಣೆ ಏಕೆ' ಎಂದು ಭದ್ರತಾ ಸಿಬ್ಬಂದಿಯನ್ನು ಪ್ರಶ್ನಿಸಿ ತಪಾಸಣೆಗೆ ಅಸಹಕಾರ ನೀಡಿದ್ದ ಆರೋಪದಡಿ ಸಜು ಕುಮಾರ್ (48) ಅವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದು, ಜಾಮೀನು ಮೇಲೆ ಸೋಮವಾರ ಬಿಟ್ಟು ಕಳುಹಿಸಿದ್ದಾರೆ.

'ಕೇರಳದ ಸಜು ಕುಮಾರ್, ನಗರದ ಕಂಪನಿಯೊಂದರ ಉದ್ಯೋಗಿ. ಕೇರಳದಲ್ಲಿರುವ ಅವರ ತಂಗಿಯ ಮಗು ಮೃತಪಟ್ಟಿತ್ತು. ಮಗುವನ್ನು ನೋಡಲು ವಿಮಾನದಲ್ಲಿ ಹೊರಟಿದ್ದ ವೇಳೆ ಅವರು ತಪಾಸಣೆಗೆ ಅಡ್ಡಿಪಡಿಸಿದ್ದರು. ಭದ್ರತಾ ಸಿಬ್ಬಂದಿ ನೀಡಿದ್ದ ದೂರಿನಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿತ್ತು. ನಂತರ ಜಾಮೀನು ಮೇಲೆ ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಗು ತೀರಿಕೊಂಡಿದ್ದರಿಂದ ದುಃಖದಲ್ಲಿದ್ದ ಸಜು ಕುಮಾರ್, ಕೇರಳದ ಕೊಚ್ಚಿಗೆ ಹೋಗಲು ವಿಮಾನದ ಸೀಟು ಕಾಯ್ದಿರಿಸಿದ್ದರು. ತರಾತುರಿಯಲ್ಲಿ ನಿಗದಿಯಂತೆ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಪ್ರವೇಶ ದ್ವಾರ ಹಾಗೂ ಇತರೆಡೆ ಹಲವು ಬಾರಿ ಅವರನ್ನು ಸಿಬ್ಬಂದಿ ತಪಾಸಣೆಗೆ ಒಳಪಡಿಸಿದ್ದರು.'

'ಸಜು ಕುಮಾರ್ ನಿಗದಿತ ವಿಮಾನ ಏರಿ ಕುಳಿತಿದ್ದರು. ಅಲ್ಲಿಗೂ ಬಂದಿದ್ದ ಸಿಬ್ಬಂದಿ, ಪುನಃ ತಪಾಸಣೆಗೆ ಒಳಪಡಿಸಿದ್ದರು. ಸಿಟ್ಟಾಗಿದ್ದ ಸಜುಕುಮಾರ್, 'ಪದೇ ಪದೇ ತಪಾಸಣೆ ಏಕೆ ಮಾಡುತ್ತಿದ್ದೀರಾ? ನನ್ನ ಬಳಿ ಬಾಂಬ್ ಹಾಗೂ ಚಾಕು ಇದೆಯಾ? ಕಿರುಕುಳ ನೀಡಬೇಡಿ' ಎಂದಿದ್ದರು. ಈ ಮಾತಿನಿಂದ ಅನುಮಾನಗೊಂಡಿದ್ದ ಸಿಬ್ಬಂದಿ, ಬ್ಯಾಗ್ ಪರಿಶೀಲನೆಗೆ ಮುಂದಾಗಿದ್ದರು. ಆದರೆ, ಸಜು ಕುಮಾರ್ ಬ್ಯಾಗ್ ನೀಡಿರಲಿಲ್ಲ. ತಪಾಸಣೆಗೂ ಅಸಹಕಾರ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಸಜು ಕುಮಾರ್ ಅವರನ್ನು ವಶಕ್ಕೆ ಪಡೆದಿದ್ದ ಸಿಬ್ಬಂದಿ, ಠಾಣೆಗೆ ಒಪ್ಪಿಸಿದ್ದರು. ಸಾರ್ವಜನಿಕರ ಜೀವಕ್ಕೆ ಕುತ್ತು ತರಲು ಯತ್ನಿಸಿದ ಆರೋಪದಡಿ ಸಜು ಕುಮಾರ್ ಅವರನ್ನು ಬಂಧಿಸಿ, ಬಿಟ್ಟು ಕಳುಹಿಸಲಾಯಿತು. ಸೋಮವಾರ ಮತ್ತೊಂದು ವಿಮಾನದಲ್ಲಿ ಅವರು ಕೊಚ್ಚಿಗೆ ಹೋಗಿರುವ ಮಾಹಿತಿ ಲಭ್ಯವಾಗಿದೆ' ಎಂದು ಹೇಳಿದರು.

ಜಮೀನು ಗಲಾಟೆ ಎದೆಗೆ ಗುದ್ದಿ ಕೊಲೆ

ಯಲಹಂಕ: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯ ಎನ್‌ಟಿಐ ಬಡಾವಣೆಯಲ್ಲಿ ಜಮೀನು ವಿಚಾರವಾಗಿ ಸೋಮವಾರ ಗಲಾಟೆ ನಡೆದಿದ್ದು, ಪ್ರಕಾಶ್ (45) ಅವರನ್ನು ಕೊಲೆ ಮಾಡಲಾಗಿದೆ.

ಕೊಲೆ ಆರೋಪದಡಿ ಎನ್‌ಟಿಐ ಸೊಸೈಟಿಯ ಕಾರ್ಯದರ್ಶಿ ಪ್ರತಾಪ್ ಚಂದ್ರ ರಾಥೋಡ್, ಗುತ್ತಿಗೆದಾರ ಆರ್. ನಾಗರಾಜ್, ಅಂಜನ್‌ಕುಮಾರ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. 9 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

1.06 ಎಕರೆ ಜಮೀನು: 'ಎನ್‌ಟಿಐ ಬಡಾವಣೆಯಲ್ಲಿ ಪ್ರಕಾಶ್‌ಗೆ ಸೇರಿದ್ದ 1.06 ಎಕರೆ ಜಮೀನಿದೆ. ಈ ಜಾಗಕ್ಕೆ ಸಂಬಂಧಿಸಿದಂತೆ ಎನ್‌ಟಿಐ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ವ್ಯಾಜ್ಯ ಹೂಡಿದೆ. ಇದೇ ವೈಷಮ್ಯದಿಂದ ಪ್ರಕಾಶ್ ಕೊಲೆಯಾಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ಸೋಮವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಅಕ್ರಮವಾಗಿ ಜಮೀನಿಗೆ ಪ್ರವೇಶಿಸಿದ್ದರು. ಇದನ್ನು ಪ್ರಶ್ನಿಸಲು ಪ್ರಕಾಶ್, ಪತ್ನಿ ಜತೆ ಸ್ಥಳಕ್ಕೆ ಹೋಗಿದ್ದರು. ಪತ್ನಿ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರು. ಅದನ್ನು ತಡೆಯಲು ಮುಂದಾದ ಪ್ರಕಾಶ್ ಎದೆಗೆ ಗುದ್ದಿದ್ದರು. ಎಳೆದಾಡಿ ಹಲ್ಲೆ ಮಾಡಿದ್ದರು. ಇದರಿಂದ ತೀವ್ರ ಗಾಯಗೊಂಡ ಪ್ರಕಾಶ್ ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ಸಂಬಂಧಿಕರು ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಪರೀಕ್ಷೆ ನಡೆಸಿದ ವೈದ್ಯರು, ಪ್ರಕಾಶ್ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಮೂಲಗಳು ತಿಳಿಸಿವೆ.

ಪ್ರತಿಭಟನೆ: 'ಪ್ರಕಾಶ್ ಕೊಲೆ ಮಾಡಿದ ಆರೋಪಿಗಳನ್ನು ಬಂಧಿಸಬೇಕು. ಅವರ ಕುಟುಂಬಕ್ಕೆ ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿ ಪ್ರಜಾ ವಿಮೋಚನಾ ಚಳವಳಿ (ಸ್ವಾಭಿಮಾನ) ಕಾರ್ಯಕರ್ತರ ನೇತೃತ್ವದಲ್ಲಿ ಸಂಬಂಧಿಕರು ಕೊಡಿಗೇಹಳ್ಳಿ ಠಾಣೆ ಎದುರು ಸೋಮವಾರ ಮಧ್ಯಾಹ್ನದಿಂದ ರಾತ್ರಿವರೆಗೂ ಪ್ರತಿಭಟನೆ ನಡೆಸಿದರು. ಪರಿಹಾರಕ್ಕೆ ಆಗ್ರಹಿಸಿದರು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
CIN : U85110KA1970SGC001919
ಸಂಖ್ಯೆ: KPCL/2023-24/SE0097 ದಿನಾಂಕ:30.01.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ **ಕೇಂದ್ರ ಕಚೇರಿ ಶಕ್ತಿಭವನದಲ್ಲಿರುವ ಕಚೇರಿಗಳಿಗೆ ಅಲಂಕಾರಿಕ ಕುಂಡಗಳ ಸರಬರಾಜಿಗಾಗಿ ಹಾಗೂ ಶಕ್ತಿಭವನದ ಟೆರೇಸ್ ಗಾರ್ಡನ್ ಮತ್ತು ಮುಂಭಾಗದಲ್ಲಿರುವ ಉದ್ಯಾನಗಳ ನಿರ್ವಹಣೆಗಾಗಿ ಎರಡು ವರ್ಷದ ಅವಧಿಗೆ ಕೈತೋಟ/ಉದ್ಯಾನವನ ನಿರ್ವಹಣೆಯಲ್ಲಿ ಅನುಭವ ಹೊಂದಿರುವ ಹಾಗೂ ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಹೊಂದಿರುವ ಪರಿಣಿತ ಏಜೆನ್ಸಿಗಳಿಂದ** ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **(URL:https//: kppp.karnataka.gov.in)** ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ.: **ರೂ.17,900/–** ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 06.02.2024, 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 08.02.2024, ಬೆಳಿಗ್ಗೆ 11.00 ಗಂಟೆಗೆ.** ತಾಂತ್ರಿಕ ಬಿಡ್‌ನಲ್ಲಿ ಪೂರ್ವಾಹತೆ ಹೊಂದಿದ ಟೆಂಡರುದಾರರ ಹಣಕಾಸಿನ ಬಿಡ್‌ಗಳನ್ನು ಸಾಧ್ಯವಾದಲ್ಲಿ **ದಿನಾಂಕ:13.02.2024ರಂದು ಬೆಳಿಗ್ಗೆ 11.30 ಗಂಟೆಗೆ** ತೆರೆಯಲಾಗುವುದು. ಅಥವಾ ಯಾವುದೇ ಅನುಕೂಲಕರ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. **ಹೆಚ್ಚಿನ ವಿವರಗಳನ್ನು ಪ್ರಧಾನ ಪ್ರಬಂಧಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕೆಪಿಸಿಎಲ್, ನಂ.82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001. ಮೊಬೈಲ್:9141608692,** ಇವರ ಕಚೇರಿಯಿಂದ ಪಡೆಯಬಹುದಾಗಿದೆ. ವೆಬ್‌ಸೈಟ್: **www.kpcl.karnataka.gov.in**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಮುಖ್ಯ ಮಾಹಿತಿ ಅಧಿಕಾರಿಯವರ ಕಛೇರಿ,
ಮಾಹಿತಿ ತಂತ್ರಜ್ಞಾನ ಇಲಾಖೆ, ಬಿಬಿಎಂಪಿ, ಅಧಿಕಾರಿ–ಐಟಿ,
2ನೇ ಮಹಡಿ, ಅನೆಕ್ಸ್–2 ಕಟ್ಟಡ, ಕೇಂದ್ರ ಕಛೇರಿ ಆವರಣ,
ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ:ಬಿಬಿಎಂಪಿ/ಉಮುಮಾಅ–ಐಟಿ/ಪಿಆರ್/34/2023–24(ಪಿ–1) ದಿನಾಂಕ: 30–01–2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಉಪ ಮುಖ್ಯ ಮಾಹಿತಿ ಅಧಿಕಾರಿ, ಬಿಬಿಎಂಪಿ ಐಟಿ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು **ವಿವಿಧ ಬಿಬಿಎಂಪಿ ಕಚೇರಿಗಳಿಗೆ 476 ಪ್ರಿಂಟರ್‌ಗಳನ್ನು** ಖರೀದಿಸಲು ಅರ್ಹ ಕಂಪನಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ. ಎಲ್ಲಾ ಆಸಕ್ತ ಬಿಡ್ದುದಾರರು ತಮ್ಮ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸಬೇಕು.

ಟೆಂಡರ್ ಉಲ್ಲೇಖ ಸಂಖ್ಯೆ: BBMP/DCIO-IT/PR/34/2023-24(P-1)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿಪಿ ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 30.01.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಸ್ಪಷ್ಟೀಕರಣಗಳನ್ನು ಪಡೆಯಲು ಕೊನೆಯ ದಿನಾಂಕ: **06–02–2024, 15.00 ಗಂಟೆಯವರೆಗೆ.** 3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **07–02–2024, 16.30 ಗಂಟೆಗೆ.** 4) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **12–02–2024, 17.00 ಗಂಟೆಗಳವರೆಗೆ.** 5) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯಮಾಪನ): **13–02–2024, 11.00 ಗಂಟೆಗಳಿಗೆ.** 6) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ವಾಣಿಜ್ಯ ಬಿಡ್ – ಸಾಧ್ಯವಾದಲ್ಲಿ): **15–02–2024, 11.00 ಗಂಟೆಗೆ.** 7) ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಿ: ಡಿಸಿಐಓ, ಬಿಬಿಎಂಪಿ, ಐಟಿ ವಿಭಾಗ, ದೂರವಾಣಿ: 9480688000, ಇ–ಮೇಲ್: dcio-it@bbmp.gov.in. 8) ಟೆಂಡರ್‌ಗಳನ್ನು ತೆರೆಯುವ ಸ್ಥಳ ಮತ್ತು ಸಂವಹನಕ್ಕಾಗಿ ವಿಳಾಸ: ಉಪ ಮುಖ್ಯ ಮಾಹಿತಿ ಅಧಿಕಾರಿ–ಐಟಿ ರವರ ಕಚೇರಿ, 2 ನೇ ಮಹಡಿ, ಅನೆಕ್ಸ್–2 ಕಟ್ಟಡ, ಎನ್.ಆರ್. ವೃತ್ತ, ಬೆಂಗಳೂರು – 560002. 9) ಇಎಂಡಿ ಮೊತ್ತ: **ರೂ. 5,00,000/–** (ರೂಪಾಯಿ ಐದು ಲಕ್ಷಗಳು ಮಾತ್ರ), ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಉಪ ಮುಖ್ಯ ಮಾಹಿತಿ ಅಧಿಕಾರಿ, ಬಿಬಿಎಂಪಿ.

ಆಟೊ ಉರುಳಿಬಿದ್ದು ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿ ಆಟೊ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಚಾಲಕ ಎಚ್.ಎನ್. ರಾಹುಲ್ (23) ಮೃತಪಟ್ಟಿದ್ದಾರೆ.

'ಉತ್ತರಹಳ್ಳಿ ಕಡೆಯಿಂದ ಚಿಕ್ಕಲಸಂದ್ರ ಕಡೆಗೆ ಹೋಗುವ ರಸ್ತೆಯಲ್ಲಿ ಸೋಮವಾರ ತಡರಾತ್ರಿ ಈ ಅವಘಡ ಸಂಭವಿಸಿದೆ. ಆಟೊದಲ್ಲಿದ್ದ ಪ್ರಯಾಣಿಕ ಕಿರಣ್ (23) ಹಾಗೂ ಬೈಕ್ ಸವಾರ ನಂದಕುಮಾರ್ (19) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು ಹೇಳಿದರು.

'ಚಾಲಕ ರಾಹುಲ್, ಆಟೊದಲ್ಲಿ ಕಿರಣ್ ಅವರನ್ನು ಹತ್ತಿಸಿಕೊಂಡು ಹೊರಟಿದ್ದರು. ನಂದ್‌ಕುಮಾರ್ ಅವರು ದಿವ್ಯಾ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ತೆರಳುತ್ತಿದ್ದರು. ಇದೇ ಸಂದರ್ಭದಲ್ಲಿ ಆಟೊ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿತ್ತು. ಪಾದಚಾರಿ ಮಾರ್ಗದಲ್ಲಿ ಆಟೊ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡಿದ್ದ ರಾಹುಲ್ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

1,466 ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವವರ ಪತ್ತೆಗಾಗಿ ನಗರದ ಶಾಲೆ–ಕಾಲೇಜುಗಳ ಬಳಿ ಸೋಮವಾರ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, 1,466 ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಸಂಚಾರ ನಿಯಮ ಉಲ್ಲಂಘನೆಯಿಂದಾಗಿ ಅಪಘಾತಗಳು ಸಂಭವಿಸುತ್ತಿವೆ. ಶಾಲೆ ಹಾಗೂ ಕಾಲೇಜು ಬಳಿಯೂ ಹೆಚ್ಚಿನ ಸಂಖ್ಯೆಯಲ್ಲಿ ನಿಯಮ ಉಲ್ಲಂಘನೆ ಆಗುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಇದೇ ಕಾರಣಕ್ಕೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ಹೆಲ್ಮೆಟ್ ರಹಿತ ಸವಾರಿ ಸೇರಿದಂತೆ ನಿಯಮ ಉಲ್ಲಂಘಿಸಿದ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ. ₹ 7.22 ಲಕ್ಷ ದಂಡ ವನ್ನೂ ವಿಧಿಸಲಾಗಿದೆ' ಎಂದು ತಿಳಿಸಿದರು.

'ಉದ್ಯೋಗಸೌಧ'ದ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಹುದ್ದೆ ಆಕಾಂಕ್ಷಿಗಳ ಪರವಾಗಿ ಕೆಪಿಎಸ್‌ಸಿ (ಉದ್ಯೋಗಸೌಧ) ಮುಂಭಾಗದಲ್ಲಿ ಮಂಗಳವಾರ ಬೆಳಿಗ್ಗೆ ಧರಣಿ ನಡೆಸಿದ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸುರೇಶ್ ಕುಮಾರ್, 'ಕೆಪಿಎಸ್‌ಸಿಯಿಂದ ಉದ್ಯೋಗಾಕಾಂಕ್ಷಿಗಳಿಗೆ ನಿರಂತರ ಅನ್ಯಾಯವಾಗುತ್ತಿದೆ. ಅವರಿಗೆ ನ್ಯಾಯಬೇಕಿದೆ. ಕೆಪಿಎಸ್‌ಸಿ ಮೇಲೆ ಒತ್ತಡ ಹೇರಲು ನಾನು ವಿವಿಧ ರೀತಿಯಲ್ಲಿ ಯತ್ನಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ' ಎಂದರು.

ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಅವರು, 'ಯುವ ಸಮೂಹದ ಪರವಾಗಿ ನ್ಯಾಯ ಕೇಳಿ ಉದ್ಯೋಗಸೌಧದ ಮುಂಭಾಗದಲ್ಲಿ ಕುಳಿತಿದ್ದ ನನ್ನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಆಯೋಗದಿಂದ ಸಮರ್ಪಕವಾಗಿ ಉತ್ತರ ಕೊಡಲು ಯಾರೂ ಬರಲಿಲ್ಲ ಅಥವಾ ಬರುವ ಧೈರ್ಯ ತೋರಲಿಲ್ಲ. ಆಯೋಗಕ್ಕೆ 'ಒಳ ಜಗಳ ನಿಲ್ಲಿಸಿ, ನ್ಯಾಯ ನೀಡಿ' ಎಂದಷ್ಟೆ ನನ್ನ ಆಗ್ರಹ' ಎಂದಿದ್ದಾರೆ.

ಉದ್ಯೋಗಸೌಧದ ಮುಂಭಾಗದಲ್ಲಿ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಮಂಗಳವಾರ ಧರಣಿ ನಡೆಸಿದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ಸಂವಿಧಾನದ ಆಶಯಗಳು' ಸಂವಾದ: ಉದ್ಘಾಟನೆ: ನ್ಯಾ. ನಾಗಮೋಹನದಾಸ್, ದಿಕ್ಸೂಚಿ ನುಡಿಗಳು: ಕೋಟಿಗಾನಹಳ್ಳಿ ರಾಮಯ್ಯ, ಆಯೋಜನೆ: ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

'ಮಾನವ ಹಕ್ಕುಗಳು ಮತ್ತು ಮಾಧ್ಯಮ' ವಿಷಯದ ಬಗ್ಗೆ ವಿಚಾರಸಂಕಿರಣ: ಉದ್ಘಾಟನೆ: ಲಿಂಗರಾಜ ಗಾಂಧಿ, ಉಪನ್ಯಾಸ: ವೆಂಕಟೇಶ್ ನಾಯಕ್, ಆಯೋಜನೆ ಹಾಗೂ ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11.30

ಕಾಲೇಜು ದಿನಾಚರಣೆ ಹಾಗೂ ನವೀಕೃತ ಸಭಾಂಗಣ ಉದ್ಘಾಟನೆ: ಮುಖ್ಯ ಅತಿಥಿ: ನಸೀರ್ ಅಹ್ಮದ್, ಅಧ್ಯಕ್ಷತೆ: ಜಿಯಾವುಲ್ಲಾ ಷರೀಫ್, ಆಯೋಜನೆ ಹಾಗೂ ಸ್ಥಳ: ಎ.ಕೆ. ಪಿಯು ಕಾಲೇಜ್ ಆಫ್ ವುಮೆನ್, ಕಬ್ಬನ್ ಪೇಟೆ, ಬೆಳಿಗ್ಗೆ 11.30

ಗಣರಾಜ್ಯೋತ್ಸವ ದಿನಾಚರಣೆ ಮತ್ತು ಕೆ. ಸುಭಾಷ್ ಆಳ್ವ ಸ್ಮಾರಕ ದತ್ತಿನಿಧಿ ಸ್ಪರ್ಧೆಗಳು: ಉದ್ಘಾಟನೆ: ಪ್ರಭಾಕರ ಬೆಳವಾಡಿ, ಅಧ್ಯಕ್ಷತೆ: ಕೆ.ಮೋಹನ್‌ದೇವ್ ಆಳ್ವ, ಮುಖ್ಯ ಅತಿಥಿ: ಕಪಿನಯ್ಯ, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಮಕ್ಕಳ ಕೂಟದ ಆವರಣ, ಮಧ್ಯಾಹ್ನ 2

ಬಿ.ಆರ್. ಅಂಬೇಡ್ಕರ್ ಆರಂಭಿಸಿದ 'ಮೂಕನಾಯಕ' ಪತ್ರಿಕೆಯ 104ನೇ ವರ್ಷಾಚರಣೆ ಪ್ರಯುಕ್ತ 'ತಳ ಸಮುದಾಯಗಳು ಮತ್ತು ಮುಖ್ಯವಾಹಿನಿ ಮಾಧ್ಯಮ: ಅಂದು–ಇಂದು' ವಿಚಾರಸಂಕಿರಣ: ಅಧ್ಯಕ್ಷತೆ: ಸಿ.ಬಿ. ಹೊನ್ನುಸಿದ್ಧಾರ್ಥ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ದಿನೇಶ್ ಅಮೀನ್ ಮಟ್ಟು, ಶ್ರೀಪಾದ್ ಭಟ್, ಮಮತಾ ಕೆ.ಎನ್., ರವಿ ಭಾಗಿ. ರಾಜಶೇಖರ್ ಮೂರ್ತಿ, ಆಯೋಜನೆ: ಅಂಬೇಡ್ಕರ್ ವಾದ ಪತ್ರಿಕೆ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 3.30

'ಕವಿದಿನ' ಪುಸ್ತಕ ಬಿಡುಗಡೆ ಮತ್ತು ಬಹುಮಾನ ವಿತರಣೆ ಸಮಾರಂಭ: ಎಂ.ಎಸ್. ಮೂರ್ತಿ ಅವರ 'ಹರಿದ ಚಡ್ಡಿ ಮತ್ತು ಇತರ ಲೇಖನಗಳು' ಪುಸ್ತಕ ಬಿಡುಗಡೆ: ಎಚ್.ಎಸ್. ಶಿವಪ್ರಕಾಶ್, ಮುಖ್ಯ ಅತಿಥಿ: ಎಂ.ಎಸ್. ಶ್ರೀರಾಮ್, ಅಧ್ಯಕ್ಷತೆ: ವರ್ಗಿಸ್ ಕೆ.ಜೆ., ಆಯೋಜನೆ ಹಾಗೂ ಸ್ಥಳ: ಕ್ರೈಸ್ಟ್ ಡೀಮ್ಡ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಸಂಜೆ 4.30

ಹಂ.ಪ.ನಾಗರಾಜಯ್ಯ

ಕುವೆಂಪು, ದ.ರಾ. ಬೇಂದ್ರೆ ಹುಟ್ಟುಹಬ್ಬ ಹಾಗೂ ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಬಿ.ಟಿ. ಲಲಿತಾ ನಾಯಕ್, ಉಪನ್ಯಾಸ: ರಾಜಶೇಖರ ಮಠಪತಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ.ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

'ತ್ರಿಪುಟದೊಳಗೆ ತ್ರಿಲೋಕ' ಮೂರು ಪುಸ್ತಕಗಳ ಲೋಕಾರ್ಪಣೆ: ಬಿ. ಭಾಸ್ಕರ ರಾವ್ ಅವರ 'ಮನುಸ್ಮೃತಿ', ಸಂದೀಪ್ ಬಾಲಕೃಷ್ಣ ಅವರ 'ದೂತವಾಕ್ಯ', ಯಂಡಮೂರಿ ವಿರೇಂದ್ರನಾಥ್ ಅವರ '21 ಒಳ್ಳೆಯ (ತನದ) ಕಥೆಗಳು', ಅಧ್ಯಕ್ಷತೆ: ಆರ್. ಗಣೇಶ್, ಉಪಸ್ಥಿತಿ: ವೀಣಾ ಬನ್ನಂಜೆ, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳ ಪ್ರದಾನ: ಸಿದ್ದರಾಮಯ್ಯ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5

'ಬೇಂದ್ರೆ' ವಿಶೇಷ ಉಪನ್ಯಾಸ: ಗೀತಾ ವಸಂತ, ಅಧ್ಯಕ್ಷತೆ: ಮಹೇಶ ಜೋಶಿ, ಮುಖ್ಯ ಅತಿಥಿ: ಬಸವ ರಾಜ ಸಬರದ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

'ಭಾರತದ ಚಂದ್ರ ಅನ್ವೇಷಣಾ ಕಾರ್ಯಕ್ರಮ'ದ ಬಗ್ಗೆ ಉಪನ್ಯಾಸ: ಅನಿಲ್ ಭಾರದ್ವಾಜ್, ಆಯೋಜನೆ: ಜವಾಹರ್‌ಲಾಲ್ ನೆಹರೂ ತಾರಾಲಯ, ಅಸ್ಟ್ರಾನಾಮಿಕಲ್ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಜವಾಹರ್‌ಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಸಂಜೆ 5.30

ದ.ರಾ. ಬೇಂದ್ರೆ ಸ್ಮರಣೆ: ನುಡಿ ನಮನ: ರಘು ವಿ., ಜಿ.ಬಿ. ಹರೀಶ್, ಪುಷ್ಪ ನಮನ: ಎಲ್. ವೆಂಕಟಪ್ಪ, ಅಧ್ಯಕ್ಷತೆ: ರಾಮೇಗೌಡ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಅಂಗಳ, ಗವಿಪುರ, ಕೆಂಪೇಗೌಡ ನಗರ, ಸಂಜೆ 5.30

'ಮಧುರಗಾನ' ಚಲನಚಿತ್ರ ಗೀತೆಗಳ ಗಾಯನ: ಉದ್ಘಾಟನೆ: ನ್ಯಾ.ಆರ್. ದೇವದಾಸ್, ಅಧ್ಯಕ್ಷತೆ: ನ್ಯಾ.ಎಂ. ನಾಗಪ್ರಸನ್ನ, ಮುಖ್ಯ ಅತಿಥಿ: ಟಿ.ಜಿ. ಶಿವಶಂಕರೇಗೌಡ, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

'ರಕ್ತ–ಧ್ವಜ' ರಂಗರೂಪಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್, ಆಯೋಜನೆ: ದೃಶ್ಯ, ಸ್ಥಳ: ಯುವಪಥ, ಜಯನಗರ, ಸಂಜೆ 7

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
TeamLease® Putting India to Work
CIN: L74140KA2000PLC118395
ನೋಂದಾಯಿತ ಕಚೇರಿ: 315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
E-MAIL: corporateaffairs@teamlease.com | WEBSITE: https://group.teamlease.com/

ಡಿಸೆಂಬರ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು 9 ತಿಂಗಳುಗಳಿಗೆ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಯ ಸಾರಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕೆಗಳು ಕೋಟಿ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ		ಕ್ರೋಢೀಕೃತ	
	31.12.2023ಕ್ಕೆ ಕೊನೆಯಾದ 3 ತಿಂಗಳಿಗೆ	31.12.2022ಕ್ಕೆ ಕೊನೆಯಾದ 3 ತಿಂಗಳಿಗೆ	31.12.2023ಕ್ಕೆ ಕೊನೆಯಾದ 3 ತಿಂಗಳಿಗೆ	31.12.2022ಕ್ಕೆ ಕೊನೆಯಾದ 3 ತಿಂಗಳಿಗೆ
	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2,236.19	1,773.23	2,455.37	2,018.25
ಸದರಿ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆಗೆ ಮುನ್ನ, ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	26.50	25.75	29.43	28.64
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ ಅಥವಾ ಅಸಾಧಾರಣ ಐಟಂಗಳ ನಂತರ)	29.13	25.95	31.12	29.03
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	29.15	26.00	31.06	29.08
ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	16.77	17.10	16.77	17.10
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)–ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	760.38	661.42	790.53	676.11
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕೀಕರಣಗೊಂಡಿಲ್ಲ)				
(ಎ) ಮೂಲ (ರೂ.)	17.37	15.18	18.49	16.94
(ಬಿ) ಡೈಲ್ಯೂಟೆಡ್ (ರೂ.)	17.37	15.18	18.49	16.94

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, 31ನೇ ಡಿಸೆಂಬರ್, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು 9 ತಿಂಗಳುಗಳಿಗೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ 31ನೇ ಡಿಸೆಂಬರ್, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು 9 ತಿಂಗಳ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 30ನೇ ಜನವರಿ, 2024ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ದಿನಾಂಕ: 30ನೇ ಜನವರಿ, 2024
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814